DFA/262778

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1133 |
| ಸದಸ್ಯರ ಹೆಸರು | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12.03.2026 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನ ಪಿಲಿಕುಳ ಮೃಗಾಲಯವನ್ನು ಮುಚ್ಚುವಂತೆ ನ್ಯಾಯಾಲಯ ಆದೇಶವಿರುವ ಮತ್ತು ಪರವಾನಿಗೆ ಮುಕ್ತಾಯಗೊಂಡಿರುವ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ವರದಿಯಾಗಿ ನಿಸರ್ಗಧಾಮ ಸಂದರ್ಶಕರಲ್ಲಿ ಮೂಡಬಹುದಾದ ಗೊಂದಲಗಳನ್ನು ಯಾವ ರೀತಿಯಲ್ಲಿ ನಿವಾರಿಸಿದೇ; ಈ ಮೃಗಾಲಯ ಚಾಲ್ತಿಯಲ್ಲಿರುವ ಪರವಾನಿಗೆ ಹೊಂದಿದೆಯೇ; | ಪಿಲಿಕುಳ ಮೃಗಾಲಯವನ್ನು ಮುಚ್ಚುವಂತೆ ನ್ಯಾಯಾಲಯದಿಂದ ಆದೇಶವಾಗಿರುವುದಿಲ್ಲ. ಕೇಂದ್ರ ಮೃಗಾಲಯ ಪ್ರಾಧಿಕಾರವು ಜೈವಿಕ ಉದ್ಯಾನವನಕ್ಕೆ ನೀಡಿರುವ ಪರವಾನಿಗೆಯು ಡಿಸೆಂಬರ್-2025 ತಿಂಗಳಲ್ಲಿ ಮುಕ್ತಾಯಗೊಂಡಿದ್ದು, ಪರವಾನಿಗೆ ನವೀಕರಿಸಲು ಅಗತ್ಯ ದಾಖಲಾತಿಗಳೊಂದಿಗೆ ಕೇಂದ್ರ ಮೃಗಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ನವೀಕರಣ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಅಧ್ಯಕ್ಷರು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರು ದಿನಾಂಕ:06.02.2026 ರಂದು ಪತ್ರಿಕಾಗೋಷ್ಠಿ ನಡೆಸಿ, ಸಂದರ್ಶಕರಲ್ಲಿ ಮೂಡಬಹುದಾದ ಗೊಂದಲಗಳನ್ನು ನಿವಾರಿಸುತ್ತಾರೆ. |
| ಆ) | ಮೃಗಾಲಯ ಪ್ರಾಧಿಕಾರದ ಮಾರ್ಗಸೂಚಿಗಳಂತೆ ಪಿಲಿಕುಳ ಮೃಗಾಲಯದಲ್ಲಿ ಅಗತ್ಯವಾಗಿ ಇರಬೇಕಾದ ಸಿಬ್ಬಂದಿಯೆಷ್ಟು; ಪ್ರಸ್ತುತ ಇಲ್ಲಿರುವ 19 ಸಿಬ್ಬಂದಿಯಿಂದ ಹಾಗೂ 1 ಪಶು ವೈದ್ಯರಿಂದ 1000 ಕ್ಕೂ ಹೆಚ್ಚು ಪ್ರಾಣಿಗಳ ಸಮರ್ಪಕ ನಿರ್ವಹಣೆ ಸಾಧ್ಯವಿದೆಯೇ; ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು; ಈ ಮೃಗಾಲಯವನ್ನು | ಮೃಗಾಲಯ ಪ್ರಾಧಿಕಾರದ ಮಾರ್ಗಸೂಚಿಗಳಂತೆ ಪಿಲಿಕುಳ ಮೃಗಾಲಯದಲ್ಲಿ ಒಟ್ಟು 46 ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.<br>ಪಿಲಿಕುಳ ಜೈವಿಕ ಉದ್ಯಾನವನದಲ್ಲಿ ಪ್ರಸ್ತುತ 23 ಅಧಿಕಾರಿ/ಸಿಬ್ಬಂದಿಗಳು ಹಾಗೂ ಒಬ್ಬ ಪಶು ವೈದ್ಯರಿಂದ ಪ್ರಾಣಿಗಳ ನಿರ್ವಹಣೆ ಮಾಡಲಾಗುತ್ತಿದೆ.<br><br>ಪ್ರಾಧಿಕಾರದ ವಿವಿಧ ವಿಭಾಗಗಳಿಗೆ ಅಗತ್ಯವಿರುವ ಹುದ್ದೆಗಳ ಗುರುತಿಸುವಿಕೆಯ ಬಗ್ಗೆ ಪ್ರಾಧಿಕಾರದಿಂದ ಸಂಬಂಧಪಟ್ಟ ವಿವಿಧ ಇಲಾಖೆಗಳೊಂದಿಗೆ ಚರ್ಚಿಸಲಾಗುತ್ತಿದ್ದು, ಜೈವಿಕ ಉದ್ಯಾನವನಕ್ಕೆ ಅರಣ್ಯ ಇಲಾಖೆಯವರು 46 ಸಿಬ್ಬಂದಿಗಳ ಅವಶ್ಯಕತೆ ಇರುವುದಾಗಿ ಶಿಫಾರಸ್ಸು ಮಾಡಿದ್ದು, ಪ್ರಸ್ತಾವನೆ ನಿರೀಕ್ಷಿಸಲಾಗಿದೆ.<br><br>ಪಿಲಿಕುಳ ಜೈವಿಕ ಉದ್ಯಾನವನ (Zoo)ದ ಅಸ್ತಿತ್ವವನ್ನು ಪಿಲಿಕುಳ ಅಭಿವೃದ್ಧಿ |



File No. ITBT/70/STS/2026-SO ST-ITBT SEC (Computer No. 2095890)
Generated from eOffice by boseraju, S&T - MIN(BU), MINISTER, MINISTER - SCIENCE AND TECHNOLOGY on 10/03/2026 11:00 AM

| | | |
|---|---|---|
| | ಮೃಗಾಲಯ ಪ್ರಾಧಿಕಾರಕ್ಕೆ ಯಾವಾಗ ಹಸ್ತಾಂತರಿಸಲಾಗುವುದು: | ಪ್ರಾಧಿಕಾರದಲ್ಲಿ ಉಳಿಸಿಕೊಂಡು ನಿರ್ವಹಣೆಯ ಹೊಣೆಗಾರಿಕೆಯನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ವಹಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ, ಬೆಂಗಳೂರು ಇವರನ್ನು ಕೋರಲಾಗಿತ್ತು.<br><br>ಅದರಂತೆ, ಸದರಿಯವರು ಪಿಲಿಕುಳ ಜೈವಿಕ ಉದ್ಯಾನವನದ ವೆಚ್ಚಗಳಾದ ಸಿಬ್ಬಂದಿಗಳ ವೇತನ, ಪಶುವೈದ್ಯಕೀಯ ಆರೈಕೆ, ಪಶು ಆಹಾರ ಮತ್ತು ನಿರ್ವಹಣಾ ವೆಚ್ಚಗಳನ್ನು ಭರಿಸಲು ಅನುದಾನವನ್ನು ಪಿಲಿಕುಳ ಪ್ರಾಧಿಕಾರದ ವತಿಯಿಂದ ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ನೀಡಲು ಒಪ್ಪಿದ್ದಲ್ಲಿ, ಕೇಂದ್ರ ಮೃಗಾಲಯ ಪ್ರಾಧಿಕಾರ ನಿಗದಿಪಡಿಸಿದ ನಿರ್ವಹಣೆ ಮತ್ತು ಕಾರ್ಯಾಚರಣೆಯ ಮಾನದಂಡಗಳಂತೆ ನಿಯಮಾನುಸಾರ ಕರ್ನಾಟಕ ಮೃಗಾಲಯ ಪ್ರಾಧಿಕಾರವು ಆಡಳಿತ ಮಂಡಳಿಯ ಅನುಮೋದನೆ ಪಡೆದ ನಂತರ ಪಿಲಿಕುಳ ಜೈವಿಕ ಉದ್ಯಾನವನದ ನಿರ್ವಹಣೆಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲಾಗುವುದು ಎಂದು ದಿನಾಂಕ:05.12.2025 ರ ಪತ್ರದ ಮೂಲಕ ವರದಿ ನೀಡಿರುತ್ತಾರೆ.<br><br>ಅದರಂತೆ, ದಿ:07.01.2026 ರಂದು ಜರುಗಿದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಪಿಲಿಕುಳ ಜೈವಿಕ ಉದ್ಯಾನವನದ ಒಟ್ಟಾರೆ ಆದಾಯ ಮತ್ತು ಖರ್ಚಿನ ಲೆಕ್ಕಾಚಾರ ಮಾಡಿ ಆದಾಯ ಹಂಚಿಕೆ ಮಾಡಿಕೊಂಡು ನಿರ್ವಹಣೆಗೆ ತಗಲುವ ವೆಚ್ಚವನ್ನು ನೀಡಿ ಮೃಗಾಲಯ ಪ್ರಾಧಿಕಾರಕ್ಕೆ ನಿರ್ವಹಣೆಯ ಜವಾಬ್ದಾರಿಯನ್ನು ಒಪ್ಪಿಸುವುದೆಂದು ತೀರ್ಮಾನಿಸಲಾಗಿದ್ದು, ಅದರಂತೆ ಕ್ರಮವಹಿಸಲಾಗುವುದು. ಸದರಿ ವಿಚಾರವನ್ನು ರಾಜ್ಯ ಮಟ್ಟದ ಸಲಹಾ ಸಮಿತಿಗೆ ಮಂಡಿಸಿದ ನಂತರ ಸದರಿ ಸಮಿತಿಯ ನಿರ್ಣಯದಂತೆ ಸೂಕ್ತ ಒಡಂಬಡಿಕೆ ಮುಖಾಂತರ ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಕ್ರಮವಹಿಸಲಾಗುವುದು. |
| ಇ) | ಪಿಲಿಕುಳ ಜೈವಿಕ ಉದ್ಯಾನವನದ ಸಿಬ್ಬಂದಿಗೆ ಸಂಬಳ, ಭತ್ಯೆಗಳು, ವೈದ್ಯಕೀಯ ಸೌಲಭ್ಯಗಳು ಮತ್ತು ರಿಸ್ಕ್ ಅಲೋಯೆನ್ಸ್ ನೀಡುವ ಕುರಿತು ಸರ್ಕಾರದ ಕ್ರಮಗಳೇನು; ಸುಮಾರು 2018 ರಿಂದ ಸಂಬಳ ಪರಿಷ್ಕರಣೆ ಮಾಡದಿರುವುದಕ್ಕೆ ಹಾಗೂ ವಾರ್ಷಿಕ ವೇತನ ಬಡ್ತಿ ನೀಡದಿರಲು ಕಾರಣವೇನು; ಈ ಕುರಿತು ಯಾವಾಗ ಕ್ರಮ | ಪಿಲಿಕುಳ ಜೈವಿಕ ಉದ್ಯಾನವನದ ಅಧಿಕಾರಿ/ಸಿಬ್ಬಂದಿಗಳ ಮಾಸಿಕ ಸಂಬಳ, ಭತ್ಯೆಗಳು, ವೈದ್ಯಕೀಯ ಸೌಲಭ್ಯಗಳು, ರಿಸ್ಕ್ ಅಲೋಯೆನ್ಸ್ ಹಾಗೂ ವಾರ್ಷಿಕ ವೇತನ ಬಡ್ತಿಯನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಮಿತಿ ಸಭೆಯ ಅನುಮೋದನೆಯಂತೆ ಈಗಾಗಲೇ ನೀಡಲಾಗಿರುತ್ತದೆ. ಯಾವುದೇ ಬಾಕಿ ಇರುವುದಿಲ್ಲ. |



File No. FBI/70/STS/2026-SO ST-FBT SEC (Computer No. 2091090)
Generated from eOffice by boseraju, S&T - MIN(BU), MINISTER, MINISTER - SCIENCE AND TECHNOLOGY on 10/03/2026 11:00 AM

| | | |
|---|---|---|
| | ಜರುಗಿಸಲಾಗುವುದು: | |
| ಈ) | ಮೃಗಾಲಯದ ಪ್ರಾಣಗಳಿಗೆ ವಿಷಪ್ರಾಶನ ಪ್ರಕರಣದಲ್ಲಿ ಆರೋಪಿತರಾಗಿರುವವರ ಸಂಬಂಧಿತ ಸಂಸ್ಥೆಗಳಿಗೆ ಆಹಾರ ಪೂರೈಕೆಯ ಉಪಗುತ್ತಿಗೆ ನೀಡಲಾಗಿರುವ ಆರೋಪಗಳಿದ್ದು, ಇಂತಹ ಘಟನೆಗಳು ಮರುಕಳಿಸದಂತೆ ಆಹಾರ ಪೂರೈಕೆ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರೊಕ್ಯೂರ್‌ಮೆಂಟ್, ತೃತೀಯಪಕ್ಷ ಗುಣಮಟ್ಟ ಪರಿಶೀಲನೆ ಇತ್ಯಾದಿ ಜಾರಿಗೊಳಿಸಲಾಗುವುದೇ: ಸರ್ಕಾರದ ಕ್ರಮಗಳೇನು: | ಮೃಗಾಲಯದ ಪ್ರಾಣಿಗಳಿಗೆ ವಿಷಪ್ರಾಶನ ಪ್ರಕರಣದಲ್ಲಿ ಆರೋಪಿತರಾಗಿರುವವರಿಗೆ ಆಹಾರ ಸರಬರಾಜಿನ ಗುತ್ತಿಗೆಯನ್ನು ವಹಿಸಿರುವುದಿಲ್ಲ. ಪ್ರಸ್ತುತ ಮಾಶಾ ಅಲ್ಲಾಹ್ ಮೀಟ್ ಸಪ್ಲೈಯರ್ಸ್, ಹೊಸಪೇಟೆ, ಬಳ್ಳಾರಿ ಹಾಗೂ ಚೇರ್ಕಳಂ ಮೊಹಮ್ಮದ್ ಅಕ್ಬರ್ ಪ್ರೈ.ಲಿ., ಚಿತ್ರದುರ್ಗ ಇವರು ಆಹಾರ ಸರಬರಾಜು ಮಾಡುವ ಗುತ್ತಿಗೆದಾರರಾಗಿರುತ್ತಾರೆ.<br><br>ಪಿಲಿಕುಳ ಜೈವಿಕ ಉದ್ಯಾನವನದ ಪ್ರಾಣಿ, ಪಕ್ಷಿ, ಉರಗಗಳಿಗೆ ಆಹಾರ ಸರಬರಾಜಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರೊಕ್ಯೂಮೆಂಟ್ ಮೂಲಕವೇ ಕ್ರಮ ಜರುಗಿಸಲಾಗುತ್ತಿದ್ದು ಗುತ್ತಿಗೆದಾರರು ಸರಬರಾಜು ಮಾಡುವ ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ಉಗ್ರಾಣ ಪರಿಪಾಲಕ ಮತ್ತು ಪ್ರಾಣಿಪರಿಪಾಲಕರ ಸಹಕಾರದೊಂದಿಗೆ ವೆಟರಿನರಿ ಅಧಿಕಾರಿಯವರು ದೈನಂದಿನ ಪರಿಶೀಲನೆ ನಡೆಸುತ್ತಾರೆ. |
| ಉ) | ಪಿಲಿಕುಳ ಜೈವಿಕ ಉದ್ಯಾನವನಕ್ಕೆ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದ್ದು, ವರ್ಷಕ್ಕೆ ಸರಾಸರಿ ಸುಮಾರು 4 ಲಕ್ಷದಷ್ಟು ಸಂದರ್ಶಿಸುತ್ತಿದ್ದರೂ ಪಿಲಿಕುಳದಲ್ಲಿ ಭದ್ರತೆ ವ್ಯವಸ್ಥೆ, ಮಾರ್ಗದರ್ಶಕ ಸಿಬ್ಬಂದಿ, ಪಾರ್ಕಿಂಗ್, ಶೌಚಾಲಯಗಳು ಹಾಗೂ ಇತರೆ ಮೂಲ ಸೌಲಭ್ಯಗಳನ್ನು ವಿಸ್ತರಿಸಲು ಸರ್ಕಾರ ಯಾವ ಕಾಲಮಿತಿಯೊಳಗೆ ಸುಧಾರಣಾ ಕ್ರಮಗಳನ್ನು ರೂಪಿಸಲಿದೆ? | ಪ್ರಸ್ತುತ ಪಿಲಿಕುಳ ಜೈವಿಕ ಉದ್ಯಾನವನದಲ್ಲಿ ಭದ್ರತೆಗೆ 3 ಪಾಳಿ(Shift)ಯಲ್ಲಿ 14 ಭದ್ರತಾ ಸಿಬ್ಬಂದಿಗಳನ್ನು ನೇಮಿಸಲಾಗಿದ್ದು, ಅವರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಪಿಲಿಕುಳ ಜೈವಿಕ ಉದ್ಯಾನವನಕ್ಕೆ ಬರುವ ಪ್ರವಾಸಿಗರಿಗೆ ಪಾರ್ಕಿಂಗ್ ವ್ಯವಸ್ಥೆಯನ್ನು ಪ್ರಾಧಿಕಾರದ ಪ್ರವೇಶ ದ್ವಾರದ ಬಳಿ ಮಾಡಲಾಗಿದೆ. ಪ್ರವಾಸಿಗರಿಗೆ ವಿಶ್ರಾಂತಿ ಪಡೆಯಲು ಆಸನದ ವ್ಯವಸ್ಥೆ ಮತ್ತು 2 ಶೌಚಾಲಯದ ವ್ಯವಸ್ಥೆ ಇದೆ. ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಶೌಚಾಲಯ ಮತ್ತು ಆಸನ ವ್ಯವಸ್ಥೆ ಇರುವ ವಿಶ್ರಾಂತಿ ಗೃಹವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರಾಧಿಕಾರ ಸಮಿತಿಯ ಅನುಮೋದನೆಯೊಂದಿಗೆ ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯವನ್ನು ನೀಡಲು ಹಂತ ಹಂತವಾಗಿ ಕ್ರಮ ವಹಿಸಲಾಗುವುದು. |

**ಐಟಿಬಿಟಿ 70 ಎಸ್ ಟಿಎಸ್ 2026**

(ಎನ್.ಎಸ್.ಭೋಸರಾಜು)
ಮಾನ್ಯ ಸಣ್ಣ ನೀರಾವರಿ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.



File No. ITBT/70/STS/2026-SO ST-ITBT SEC (Computer No. 2095890)
Generated from eOffice by boseraju, S&T - MIN(BU), MINISTER, MINISTER - SCIENCE AND TECHNOLOGY on 10/03/2026 11:00 AM